# ಕನ್ನಡನೆಲದಲ್ಲಿ ರಾಮಕೃಷ್ಣ ವಿವೇಕಾನಂದ ಭಾವಧಾರೆಯ ಆಂದೋಲನ

ಸಂಗ್ರಹ: ಸಂ.



ಶ್ರೀರಾಮಕೃಷ್ಣ ತಪೋವನ, ಪೊಳಲಿ, ಮಂಗಳೂರು

ಇಂದು ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನಸಂದೇಶಗಳು ಜಗತ್ತಿನಾದ್ಯಂತ ಹರಡಿ, ಅನೇಕ ಮುಮುಕ್ಷುಗಳ, ಸಾಧಕರ ದಾರಿದೀಪವಾಗಿವೆ. ಜಾತಿ–ಮತವೆನ್ನದೆ, ಉಚ್ಚ–ನೀಚ ಎನ್ನದೆ ಎಲ್ಲೆಲ್ಲಿ ಪ್ರಾಮಾಣಿಕ ಜೀವನವಿದೆಯೋ ಆ ಜೀವಿಗಳ ಉದ್ಧಾರದ ಭಾರಹೊತ್ತ ದಿವ್ಯತ್ರಯರ ಜೀವನ–ಸಂದೇಶಗಳು ಜಗತ್ತಿನಾದ್ಯಂತ ಮೂಲೆ ಮೂಲೆಗೂ ಹೊಕ್ಕಿವೆ. ಹಾಗೆಂದೇ ರಾಮಕೃಷ್ಣ ಮಹಾಸಂಘದ ಶಾಖೆಗಳು ಇಲ್ಲದ ನೂರಾರು ಕಡೆಗಳಲ್ಲಿ ಸ್ಥಳೀಯ ಭಕ್ತರು ಅಥವಾ ಸಂನ್ಯಾಸಿಗಳು ಆಶ್ರಮಗಳನ್ನು, ಸತ್ಸಂಗಕೇಂದ್ರಗಳನ್ನು, ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ಇನ್ನಿತರ ಸೇವಾಕೇಂದ್ರಗಳನ್ನು ದಿವ್ಯತ್ರಯರ ಹೆಸರಿನಲ್ಲಿ ನಡೆಸುತ್ತ, ಆಧ್ಯಾತ್ಮಿಕ ಆನಂದವನ್ನು ಕಂಡುಕೊಳ್ಳುತ್ತಿದ್ದಾರೆ. ಈ ಪ್ರಕ್ರಿಯೆಗೆ ಕರ್ನಾಟಕವೂ ಹೊರತಲ್ಲ.

### ಮೊದಲನೆಯ ವಿಭಾಗ

ಬಹಳ ಹಿಂದೆಯೇ, ರಾಮಕೃಷ್ಣ–ವಿವೇಕಾನಂದರ ಭಾವಧಾರೆಯ ಕಡೆಗೆ ಆಕರ್ಷಿತರಾದ ಭಕ್ತರು, **ಬಳ್ಳಾರಿ, ಕೊಳ್ಳೇಗಾಲ** ಮತ್ತು **ದಾವಣಗೆರೆಗಳಲ್ಲಿ** ಆಶ್ರಮಗಳನ್ನು ಸ್ಥಾಪಿಸಿ ಕೊಂಡಿದ್ದರು. ಪೂಜೆ, ಪಾರಾಯಣ, ಭಜನೆ, ಪ್ರವಚನ, ಜಯಂತ್ಯುತ್ಸವಗಳ ಆಚರಣೆ ಮತ್ತು ಸೇವಾಕಾರ್ಯಗಳು ಬೆಂಗಳೂರು ಹಾಗೂ ಮೈಸೂರಿನ ಆಶ್ರಮಗಳ ಸ್ವಾಮೀಜಿಯವರ ಮಾರ್ಗದರ್ಶನದ ಮೇರೆಗೆ, ನಿಯಮಿತವಾಗಿ ನಡೆಯುತ್ತಿದ್ದವು. ಈ ಆಶ್ರಮಗಳ ಅಭಿವೃದ್ಧಿಯಲ್ಲಿ ಸ್ವಾಮಿ ಸೋಮನಾಥಾನಂದಜಿ, ಸ್ವಾಮಿ ಸುರೇಶಾನಂದಜಿ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಗೌತಮಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ಜಗದಾತ್ಮಾನಂದಜಿ ಮೊದಲಾದ ಹಿರಿಯ ಸ್ವಾಮಿಗಳ ಪಾತ್ರ ಗಣನೀಯವಾದದ್ದು. ತದನಂತರ, ಸ್ವಾಮಿ ವೀತಭಯಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಪೂರ್ಣಕಾಮಾನಂದಜಿ ಮತ್ತು ಸ್ವಾಮಿ ನಿತ್ಯಸ್ಥಾನಂದಜಿ ಮತ್ತಿತರ ಸ್ವಾಮಿಗಳು ಈ ಆಶ್ರಮಗಳ ಸಂಪರ್ಕ ಇಟ್ಟುಕೊಂಡು, ಪ್ರೋತ್ಸಾಹಿಸುತ್ತಿದ್ದಾರೆ.

### ಎರಡನೆಯ ವಿಭಾಗ

ಉತ್ತರಕರ್ನಾಟಕದಲ್ಲಿ ರಾಮಕೃಷ್ಣ ಮಹಾಸಂಘದ ಯಾವುದೇ ಶಾಖೆಗಳು ಇಲ್ಲದ ಕಾಲದಲ್ಲಿಯೂ ಅನೇಕರು ದಿವ್ಯತ್ರಯರ ಸಂದೇಶಗಳಿಂದ ಸ್ಫೂರ್ತಿಗೊಂಡು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡವರಿದ್ದಾರೆ. ಆದರೆ ಈ ಸಂದೇಶಗಳು ಹೆಚ್ಚು ಜನರ ಮನವನ್ನು ಸೂರೆಗೊಂಡದ್ದು ೧೯೮೯ ರಲ್ಲಿ ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿ ಅವರು ಉತ್ತರ ಕರ್ನಾಟಕದ ಪ್ರವಾಸ ಕೈಗೊಂಡಾಗ. ಪೂಜ್ಯ ಸ್ವಾಮೀಜಿಯವರ ವ್ಯಕ್ತಿತ್ವ, ಅವರ ಗಾನಮಾಧುರ್ಯ, ಅವರ ಕಾರ್ಯಕ್ರಮಗಳ ಶೈಲಿ, ಸರಳ ಸುಲಭ ರೀತಿಯಲ್ಲಿ ಜನರ ಮನಮುಟ್ಟುವಂತೆ ವಿಚಾರಮಂಡನೆ ಮಾಡಬಲ್ಲ ಅವರ ಸಾಮರ್ಥ್ಯ – ಇವೆಲ್ಲವೂ ಹೆಚ್ಚು ಜನರನ್ನು ದಿವ್ಯತ್ರಯರ ಸಂದೇಶಗಳತ್ತ ಆಕರ್ಷಿಸಿದವು.

ಇಲ್ಲಿನ ಜನ ಕ್ರಮೇಣ ದಿವ್ಯತ್ರಯರ ಸಂದೇಶಗಳನ್ನು ಪ್ರಚಾರ ಮಾಡುವ ಸಂಘಸಂಸ್ಥೆಗಳ ಆವಶ್ಯಕತೆಯನ್ನು ಮನಗಂಡರು. ಹೀಗಾಗಿ ಉತ್ತರಕರ್ನಾಟಕದ ಅನೇಕ ಸ್ಥಳಗಳಲ್ಲಿ ಆಶ್ರಮಗಳು ಸ್ಥಾಪನೆಗೊಂಡವು. ಹಾಗೆಯೇ ದಕ್ಷಿಣ ಕರ್ನಾಟಕದಲ್ಲಿಯೂ, ರಾಮಕೃಷ್ಣ ಮಹಾಸಂಘದ ಶಾಖೆಗಳು ಇಲ್ಲದ ಕಡೆ, ಹಲವಾರು ಆಶ್ರಮಗಳು ಆರಂಭಗೊಂಡವು. ಅದಲ್ಲದೆ, ಬೆಂಗಳೂರು ನಗರದ ಹಲವು ಬಡಾವಣೆಗಳ ಆಧ್ಯಾತ್ಮಿಕ ಪಿಪಾಸುಗಳ ಆವಶ್ಯಕತೆಯನ್ನು

ಪೂರೈಸಲು ಆಶ್ರಮಗಳು ಹುಟ್ಟಿಕೊಂಡವು. ಈ ಆಶ್ರಮಗಳ ವೈಶಿಷ್ಟ್ಯವೆಂದರೆ, ಸಂನ್ಯಾಸಿಗಳು ಇವನ್ನು ನಡೆಸುತ್ತಿರುವುದು. ರಾಮಕೃಷ್ಣ ಮಹಾಸಂಘಕ್ಕೆ ಅವರು ಸೇರಿಲ್ಲವಾದರೂ, ರಾಮ ಕೃಷ್ಣ ಪರಂಪರೆಯ ಪ್ರಭಾವ ಅವರ ಮೇಲೆ ಧಾರಾಳವಾಗಿ ಇದೆ. ಹೀಗಾಗಿ ಒಂದು ವಿನೂತನ ಮಾದರಿಯ ರಾಮಕೃಷ್ಣ–ವಿವೇಕಾನಂದ–ವೇದಾಂತ ಪ್ರಚಾರದ ಆಂದೋಲನ ಕಳೆದ ಎರಡು ದಶಕಗಳಿಂದಷ್ಟೇ ಕರ್ನಾಟಕದಲ್ಲಿ ಆರಂಭಗೊಂಡು, ಬೆಳೆದುಬರುತ್ತಿದೆ.

ಈ ಬಗೆಯ ಆಶ್ರಮಗಳನ್ನು ನಡೆಸುತ್ತ, ಕರ್ನಾಟಕ ಮತ್ತು ವಿದೇಶಗಳಲ್ಲೂ ರಾಮಕೃಷ್ಣ–ವಿವೇಕಾನಂದ ಭಾವಧಾರೆಯ ಪ್ರಚಾರವನ್ನು ಮಾಡುತ್ತಿರುವ ಸಂನ್ಯಾಸಿಗಳಲ್ಲಿ, ಸ್ವಾಮಿ ನಿರ್ಭಯಾನಂದ ಸರಸ್ವತಿ, ಸ್ವಾಮಿ ವೀರೇಶಾನಂದ ಸರಸ್ವತಿ, ಸ್ವಾಮಿ ಯೋಗೀಶ್ವರಾನಂದಜಿ, ಸ್ವಾಮಿ ವಿಜಯಾನಂದಜಿ ಮೊದಲಾದವರು ಪ್ರಮುಖರು. ಅವರು ಕ್ರಮವಾಗಿ, ಬಿಜಾಪುರ–ಗದಗ, ತುಮಕೂರು, ಬೆಂಗಳೂರಿನ ಗಿರಿನಗರ, ಧಾರವಾಡಗಳಲ್ಲಿ ಆಶ್ರಮಗಳನ್ನು ನಡೆಸುತ್ತಿದ್ದಾರೆ. ಅದಲ್ಲದೆ ಕರ್ನಾಟಕದಾದ್ಯಂತ ಸತ್ಸಂಗಗಳನ್ನು ನಡೆಸುತ್ತಿದ್ದಾರೆ, ಪ್ರವಚನಗಳನ್ನು ನೀಡುತ್ತಿದ್ದಾರೆ. ಇನ್ನಿತರ ಕಡೆಗಳಲ್ಲಿನ ಆಶ್ರಮಗಳು ಮತ್ತು ಅವುಗಳನ್ನು ನಡೆಸುತ್ತಿರುವ ಸಂನ್ಯಾಸಿಗಳ ವಿವರ ಹೀಗಿದೆ: ಸ್ವಾಮಿ ಚಂದ್ರೇಶಾನಂದಜಿ– ಕೃಷ್ಣರಾಜಪುರಂ, ಬೆಂಗಳೂರು, ಸ್ವಾಮಿ ರಘುವೀರಾನಂದಜಿ–ಹುಬ್ಬಳ್ಳಿ, ಸ್ವಾಮಿ ಭವೇಶಾನಂದಜಿ–ಕಾರವಾರ, ಸ್ವಾಮಿ ಬ್ರಹ್ಮನಿಷ್ಠಾನಂದಜಿ–ಚಿತ್ರದುರ್ಗ, ಸ್ವಾಮಿ ಪ್ರಕಾಶಾನಂದಜಿ–ರಾಣೆಬೆನ್ನೂರು, ಸ್ವಾಮಿ ವಿನಯಾನಂದಜಿ–ಶಿವಮೊಗ್ಗ, ಸ್ವಾಮಿ ಶಾಂತಾನಂದಜಿ–ಮಾಗಡಿ ರಸ್ತೆ, ಬೆಂಗಳೂರು; ಸ್ವಾಮಿ ಶಾರದಾತ್ಮಾನಂದಜಿ– ಕೆಂಗೇರಿ ಉಪ ನಗರ, ಬೆಂಗಳೂರು; ಸ್ವಾಮಿ ಮಹೇಶ್ವರಾನಂದಜಿ–ಗುಲ್ಬರ್ಗ, ಸ್ವಾಮಿ ಜ್ಯೋತಿರ್ಮಯಾನಂದಜಿ–ಬೀದರ್, ಮಾತಾ ಚೈತನ್ಯ ಮಯೀ– ಹಿರಿಯೂರು, ಮಾತಾ ವಿವೇಕಮಯೀ– ಭವತಾರಿಣಿ ಆಶ್ರಮ, ಬೆಂಗಳೂರು, ಮಾತಾ ತ್ಯಾಗಮಯೀ– ಚಳ್ಳಕೆರೆ, ಸ್ವಾಮಿ ನಿರ್ಮಲಾನಂದಜಿ– ಮಧುಗಿರಿ ಮತ್ತು ಮಂಡ್ಯ, ಸ್ವಾಮಿ ಚೈತನ್ಯಾನಂದಜಿ– ಕೊಪ್ಪಳ.

ಈ ಆಶ್ರಮಗಳ ಸಾಮಾನ್ಯ ಧ್ಯೇಯೋದ್ದೇಶಗಳನ್ನು ಹೀಗೆ ಸಂಗ್ರಹಿಸಬಹುದು: ಇಂದಿನ ಪ್ರಕ್ಷುಬ್ಧ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿದಾಗ, ವಿಚಾರವಂತರಿಗೆ ನಿರಾಶಾದಾಯಕವಾದ ಪರಿಣಾಮ ಕಾದಿದೆ. ಈ ವ್ಯವಸ್ಥೆಗೆ ಚಿಕಿತ್ಸೆ ನೀಡಬೇಕಾದರೆ, ಅದಕ್ಕಿರುವ ಒಂದೇ ಉಪಾಯವೆಂದರೆ, ರಾಮಕೃಷ್ಣ–ವಿವೇಕಾನಂದರ ಜೀವನ ಸಂದೇಶಗಳನ್ನು ಜನರಿಗೆ ತಲುಪಿಸುವಂಥದ್ದು. ಅದಕ್ಕೆಂದೇ ಈ ಆಶ್ರಮಗಳನ್ನು ಸ್ಥಾಪಿಸಲಾಗಿದೆ.

ಈ ಆಶ್ರಮಗಳು, ಮುಖ್ಯವಾಗಿ ತಮ್ಮ ಪರಿಸರದಲ್ಲಿ ಮತ್ತು ಇತರೆಡೆಗಳಲ್ಲಿ ಸತ್ಸಂಗ ಕಾರ್ಯಕ್ರಮಗಳನ್ನು ನಡೆಸುತ್ತವೆ. ಅಲ್ಲದೆ ಅವುಗಳು ನಡೆಸುವ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಕೆಲವು ಹೀಗಿವೆ: ನಿತ್ಯಪೂಜೆ, ಪ್ರಾರ್ಥನೆ, ಭಕ್ತರ ಸಮಾವೇಶ, ಆಶ್ರಮಗಳಲ್ಲಿ ಮತ್ತು ಶಾಲಾಕಾಲೇಜುಗಳಲ್ಲಿ ಯುವಸಮಾವೇಶಗಳು ಮತ್ತು ವ್ಯಕ್ತಿತ್ವವಿಕಸನ ಶಿಬಿರಗಳು, ಯೋಗಾಸನ–ಪ್ರಾಣಾಯಾಮ ತರಗತಿಗಳು, ದಿವ್ಯತ್ರಯರ ಹಾಗೂ ಇತರೆ ಅವತಾರಪುರುಷರ ಜಯಂತ್ಯುತ್ಸವಗಳು, ವಿಶೇಷ ದಿನಗಳಂದು ಭಜನೆ–ಉಪನ್ಯಾಸ ಕಾರ್ಯಕ್ರಮಗಳು, ರಾಮಕೃಷ್ಣ–ವಿವೇಕಾನಂದ ಸಾಹಿತ್ಯದ ಮಾರಾಟ, ಪುಸ್ತಕ ಮತ್ತು ಸಿ.ಡಿ. ಮುಂತಾದವುಗಳ ಪ್ರಕಾಶನ, ಆಧ್ಯಾತ್ಮಿಕ ಪತ್ರಿಕೆಗಳು ('ವಿವೇಕದೀಪ್ತಿ','ನವಚಿಂತನ', 'ಶ್ರೀನುಡಿ', 'ಸಾಧನಸೌರಭ'), ವಿದ್ಯಾರ್ಥಿನಿಲಯಗಳು, ಬಾಲಕಸಂಘ ಮತ್ತು ಯುವಕಸಂಘಗಳು, ಶಾಲೆಗಳು, ವೈದ್ಯಕೀಯ ಸೇವೆ, ಭಜನೆ–ವೇದಪಾರಾಯಣ–ಭಗವದ್ಗೀತಾ ತರಗತಿಗಳು, ವಿಶೇಷ ಉಪನ್ಯಾಸ ಮಾಲೆಗಳು, ವಿಷ್ಣುಸಹಸ್ರನಾಮ ಮತ್ತು ಲಲಿತಾ ಸಹಸ್ರನಾಮ ಪಾರಾಯಣಗಳು, ದಿವ್ಯತ್ರಯರ ಜೀವನ–ಸಂದೇಶಗಳ ಅಧ್ಯಯನ ಸಂಕಲ್ಪ ವ್ರತಗಳು, ಶ್ರೀಮಾತೆಯವರ ಜಯಂತಿಯಂದು ಜೀವಂತ ದುರ್ಗಾಪೂಜೆ, ದೀನದಲಿತರಿಗೆ ಅನ್ನ–ವಸ್ತ್ರ–ಧನ ಮುಂತಾದ ರೀತಿಯಲ್ಲಿ ಸಹಾಯ, ಪ್ರಕೃತಿವಿಕೋಪದ ಸಮಯದಲ್ಲಿ ಪರಿಹಾರ, ಸ್ಥಳೀಯ ಧಾರ್ಮಿಕ ಮತ್ತು ಸೇವಾಸಂಸ್ಥೆಗಳೊಡನೆ ನಿಕಟಬಾಂಧವ್ಯ. ಇನ್ನೂ ಹಲವಾರು ವಿಧಾನಗಳಲ್ಲಿ ಈ ಆಶ್ರಮಗಳು ದಿವ್ಯತ್ರಯರ ಕೈಂಕರ್ಯದಲ್ಲಿ ನಿರತವಾಗಿವೆ.

### ಮೂರನೆಯ ವಿಭಾಗ

ಬಳ್ಳಾರಿಗೆ ಸಮೀಪದ ಕುಡಿತಿನಿ ಗ್ರಾಮದಲ್ಲಿರುವ 'ರಾಮಗಿರಿ ಆಶ್ರಮ' ವು ರಾಮಕೃಷ್ಣ–ವಿವೇಕಾನಂದ ಭಾವಧಾರೆಯಿಂದ ಪ್ರೇರಿತವಾಗಿದ್ದು, ಹಲವಾರು ವರ್ಷಗಳಿಂದ ಶಾಲೆ ಮತ್ತು ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಶ್ರೀ ಪಿ.ಪಂಪಾಪತಿ ಅವರು ಇದರ ಮುಖ್ಯಸ್ಥರು. ಸ್ವಾಮಿ ಜಪಾನಂದಜಿ ಅವರು ತುಮಕೂರು ಜಿಲ್ಲೆಯ ಪಾವಗಡದಲ್ಲಿ 'ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ರೂರಲ್ ಹೆಲ್ತ್' ಎಂಬ ಒಂದು ಉತ್ತಮ ಆಸ್ಪತ್ರೆಯನ್ನು ನಿರ್ಮಿಸಿದ್ದಾರೆ; ಸುತ್ತಲಿನ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಹಾಗೆಯೇ ಆಧ್ಯಾತ್ಮಿಕ ಚಟುವಟಿಕೆಗಳನ್ನು ಕೂಡ ನಡೆಸುತ್ತಿದ್ದಾರೆ.

ಇದಲ್ಲದೆ, ಅಮೆರಿಕದಲ್ಲಿ ಹಲವಾರು ವರ್ಷಗಳಿಂದ ನೆಲೆಸಿರುವ ಸ್ವಾಮಿ ಓಂಕಾರಾನಂದಜಿ ಅವರು ತಮ್ಮ ಹುಟ್ಟೂರಾದ ತುಮಕೂರು ಜಿಲ್ಲೆ, ತುರುವೇಕೆರೆ ತಾಲೋಕಿನ ಮಾದಿಹಳ್ಳಿ ಎಂಬಲ್ಲಿ, ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಲಕ್ಷ್ಮೀನಾರಾಯಣರ ಪ್ರತಿಮೆಗಳನ್ನು ಒಳಗೊಂಡ ಭವ್ಯ ಮಂದಿರವೊಂದನ್ನು ಕಟ್ಟಿಸಿದ್ದಾರೆ. ಸುಂದರ ತೋಟ, ಹೊಲ ಮತ್ತು ಪ್ರಕೃತಿಸೌಂದರ್ಯದ ಮಧ್ಯೆ ಇರುವ 'ಬದರಿಕಾಶ್ರಮ' ಎಂಬ ಈ ಆಶ್ರಮದಲ್ಲಿ ಇತ್ತೀಚಿಗೆ ಒಂದು ಶಾಲೆ ಕೂಡ ಆರಂಭವಾಗಿದೆ. ಅದಲ್ಲದೆ ಸುತ್ತಮುತ್ತಲ ಗ್ರಾಮ ಪಟ್ಟಣ ವಾಸಿಗಳಿಗೆ, ವಿದ್ಯಾರ್ಥಿಗಳಿಗೆ ಅನೇಕ ವಿಧದ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಶ್ರೀರಾಮಕೃಷ್ಣ ಭಾವಧಾರೆಯಿಂದ ಪ್ರೇರಿತರಾದ ಸ್ವಾಮಿ ಲಕ್ಷ್ಮೀನಾರಾಯಣ್

ಎಂಬ ಹಿರಿಯ ಸಾಧುಗಳು, ತುಮಕೂರು ಜಿಲ್ಲೆಯ ಮಧುಗಿರಿ ಸಮೀಪದ ತಗ್ಗಿಹಳ್ಳಿ ಎಂಬ ಗ್ರಾಮದಲ್ಲಿ ರಾಮಕೃಷ್ಣ ಆಶ್ರಮವನ್ನು ನಡೆಸುತ್ತಿದ್ದಾರೆ. ಇತ್ತೀಚಿಗೆ, ಮಂಗಳೂರಿಗೆ ಹತ್ತಿರದ ಪೊಳಲಿ ಗ್ರಾಮದಲ್ಲಿ 'ರಾಮಕೃಷ್ಣ ತಪೋವನ' ಸ್ಥಾಪನೆಗೊಂಡಿದ್ದು, ಭವ್ಯವಾದ ಮಂದಿರವನ್ನು ಅಲ್ಲಿ ನಿರ್ಮಿಸಲಾಗಿದೆ. ಶ್ರೀ ಬಾಲ ಕೃಷ್ಣ ಶೆಟ್ಟಿ ಅವರು ಇದರ ಎಲ್ಲ ವೆಚ್ಚವನ್ನು ವಹಿಸಿಕೊಂಡು, ನಡೆಸುತ್ತಿದ್ದಾರೆ.

### ನಾಲ್ಕನೆಯ ವಿಭಾಗ

ಆಶ್ರಮಗಳು ಎಂದು ಹೆಸರಿಸಲಾಗದಿದ್ದರೂ, ದಿವ್ಯತ್ರಯರ ಸಂದೇಶದ ಬೆಳಕಿನಲ್ಲಿ ಶೈಕ್ಷಣಿಕ ಮತ್ತು ವೈದ್ಯಕೀಯ ಸೇವಾ ಕಾರ್ಯಗಳನ್ನು ನಡೆಸುತ್ತಿರುವ ಅನೇಕ ಸಂಸ್ಥೆಗಳು ಕರ್ನಾಟಕದಲ್ಲಿ ಇವೆ. ಬಿಳಿಗಿರಿರಂಗನ ಬೆಟ್ಟದಲ್ಲಿ ಹಲವಾರು ವರ್ಷಗಳಿಂದ ಡಾ.ಸುದರ್ಶನ್ ಅವರು ನಡೆಸುತ್ತಿರುವ ಆಸ್ಪತ್ರೆ, ಶಾಲೆ ಮುಂತಾದ ಸೇವಾಸಂಸ್ಥೆಗಳು ಇರುವ 'ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ,' ಚಾಮರಾಜನಗರದಲ್ಲಿ ಶ್ರೀ ಜಯದೇವ್ ಅವರು ನಡೆಸುತ್ತಿರುವ 'ದೀನಬಂಧು', ಮೈಸೂರು ಜಿಲ್ಲೆಯ ಹೆಚ್. ಡಿ. ಕೋಟೆ ತಾಲೋಕಿನಲ್ಲಿ ಡಾ. ಬಾಲಸುಬ್ರಹ್ಮಣ್ಯಂ ಮತ್ತಿತರ ಉತ್ಸಾಹಿ ವೈದ್ಯರು ಯಶಸ್ವಿಯಾಗಿ ನಡೆಸುತ್ತಿರುವ 'ವಿವೇಕಾನಂದ ಯೂತ್ ಮೂವ್‌ಮೆಂಟ್', ಪ್ರೊ. ಎನ್. ಕೃಷ್ಣಸ್ವಾಮಿ ಮತ್ತಿತರರು ಹುಟ್ಟುಹಾಕಿರುವ ಬೆಂಗಳೂರಿನ 'ವಿವೇಕಾನಂದ ಎಜುಕೇಷನಲ್ ಸೊಸೈಟಿ', ಬೆಂಗಳೂರಿನ 'ವಿವೇಕದೃಷ್ಟಿ' ಕಣ್ಣಾಸ್ಪತ್ರೆ, ಮೈಸೂರಿನ 'ಶ್ರೀರಾಮಕೃಷ್ಣ ಸೇವಾ ಕೇಂದ್ರ' ಮತ್ತು ಅದು ನಡೆಸುತ್ತಿರುವ ಶಾಲೆ, ಮೈಸೂರಿನಲ್ಲಿ ಡಾ.ವಿದ್ಯಾಸಾಗರ್ ಅವರು ನಡೆಸುತ್ತಿರುವ 'ಚೇತನಾ ಟ್ರಸ್ಟ್', ಶಿವಮೊಗ್ಗದ 'ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ', ಬೆಂಗಳೂರಿನ 'ವಿವೇಕಾನಂದ ಫೌಂಡೇಶನ್' ಮುಂತಾದವು ಇವುಗಳಲ್ಲಿ ಸೇರುತ್ತವೆ.

### ಐದನೆಯ ವಿಭಾಗ

ಇದಲ್ಲದೆ, ಬೆಂಗಳೂರು ನಗರದಲ್ಲಿ ಮುಖ್ಯವಾಗಿ ಮತ್ತು ಇತರೆಡೆಗಳಲ್ಲಿ ಕೂಡ, ಅನೇಕ ಭಕ್ತರು ಸತ್ಸಂಗ ಕೇಂದ್ರಗಳನ್ನೂ, ಭಜನಾಮಂಡಲಿಗಳನ್ನೂ, ಆಶ್ರಮಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಅನೇಕರು ತಮ್ಮ ಮನೆಗಳಲ್ಲಿಯೇ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಹಲವು ಕಡೆ ನಿಯಮಿತ ಪೂಜೆ ಕೂಡ ನಡೆಯುತ್ತಿದೆ. ಅವುಗಳಲ್ಲಿ ಮುಖ್ಯವಾದುವನ್ನು ಇಲ್ಲಿ ಹೆಸರಿಸಬಹುದು: ಬೆಂಗಳೂರು: ರಾಮಕೃಷ್ಣ–ಶಾರದಾ ಶಕ್ತಿಕೇಂದ್ರ, ಶಾರದಾ ಗುರುಕುಲ, ಶಾರದಾದೇವಿ ಆಧ್ಯಾತ್ಮಿಕ ಮಂದಿರ, ಸ್ವಾಮಿ ವಿವೇಕಾನಂದ ಶಕ್ತಿ ಸಂಚಲನ ಇತ್ಯಾದಿ; **ಹೊಸಕೋಟೆ:** ಸ್ವಾಮಿ ವಿವೇಕಾನಂದ ಸೇವಾಕೇಂದ್ರ; **ಬಾರ್ಕೂರು:** ಸ್ವಾಮಿ ವಿವೇಕಾನಂದ ಶಕ್ತಿಕೇಂದ್ರ,

ಹಾಗೆಯೇ ಕಳೆದ ಹಲವಾರು ವರ್ಷಗಳಿಂದ, **'ವಿವೇಕಹಂಸ'** ಮಾಸಪತ್ರಿಕೆಯನ್ನು ನಡೆಸಿಕೊಂಡುಬರುತ್ತಿರುವ ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾದ ಶ್ರೀ ಸುರೇಶ್ (ಮುನ್ನ) ಅವರ ಕೊಡುಗೆಯನ್ನು ಇಲ್ಲಿ ಸ್ಮರಿಸಲೇಬೇಕು. ಹಾಗೂ, 'ವಿವೇಕಹಂಸ'ವು ಹಲವಾರು ಮೌಲಿಕ ಪುಸ್ತಕಗಳನ್ನು ಪ್ರಕಟಿಸುತ್ತಿದೆ; ಪುಸ್ತಕ ಭಂಡಾರವೊಂದನ್ನು ನಡೆಸುತ್ತಿದೆ; ಭಕ್ತಸಮಾವೇಶ, ವ್ಯಕ್ತಿತ್ವ ವಿಕಸನ ಶಿಬಿರಗಳು ಮತ್ತು ಆಪ್ತಸಲಹಾ ತರಗತಿಗಳನ್ನು ನಿಯಮಿತವಾಗಿ ಆಯೋಜಿಸುತ್ತಿದೆ.

### ಪ್ರೇರಣಾಶಕ್ತಿ

ಮೇಲೆ ಹೇಳಿದ ಸಂಘಟನೆಗಳಿಗೆ, ಅದರಲ್ಲೂ ಎರಡನೆಯ ಮತ್ತು ಐದನೆಯ ವಿಭಾಗಗಳಿಗೆ ಸೇರಿದ ಆಶ್ರಮಗಳು ಮತ್ತು ಸತ್ಸಂಗ ಕೇಂದ್ರಗಳಿಗೆ ಪ್ರೇರಣಾದಾಯಕ ಶಕ್ತಿಯಾಗಿದ್ದವರು ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜ್ ಅವರು. ಅವರಿಂದ ಪ್ರೇರಣೆ ಪಡೆದು, ಆಶ್ರಮಗಳನ್ನು ನಡೆಸುತ್ತಿರುವ ಇಬ್ಬರು ಸಂನ್ಯಾಸಿಗಳು ಬರೆದಿರುವ ಕೆಳಗಿನ ಮಾತುಗಳು ಇಲ್ಲಿ ಮನನೀಯ: ('*ವಿವೇಕಹಂಸ*' ಮಾಸಪತ್ರಿಕೆ, ಏಪ್ರಿಲ್, ೨೦೦೬):

" ...ಎಲ್ಲರೂ ದಿವ್ಯತ್ರಯರ ದಿವ್ಯಜೀವನದ ಬೆಳಕನ್ನು ತಮ್ಮ ಜೀವನದಲ್ಲಿ ತುಂಬಿಸಿಕೊಂಡು ಕೃತಾರ್ಥರಾಗುವಂತಾಗಲೆಂದು ಸ್ವಾಮಿ ಪುರುಷೋತ್ತಮಾನಂದಜಿ ಅವರ ಹೃದಯ ಚಡಪಡಿಸುತ್ತಿತ್ತು. .. ಈ ಕಾರಣದಿಂದ ಬರವಣಿಗೆ ಮೂಲಕ, ಭಜನೆ–ಉಪನ್ಯಾಸಗಳ ಮೂಲಕ, ಶಾಲಾ–ಕಾಲೇಜುಗಳಲ್ಲಿ ಸ್ಪರ್ಧೆ ನಡೆಸುವುದರ ಮೂಲಕ, ದಣಿವರಿಯದೆ ದಿವ್ಯತ್ರಯರ ಜೀವನ–ಸಂದೇಶಗಳನ್ನು ಅವರು ಪ್ರಸಾರ ಮಾಡುತ್ತ ಬಂದರು. ಕರ್ನಾಟಕದಾದ್ಯಂತ ಸಂಚರಿಸುತ್ತ, ಮೂಲೆಮೂಲೆಗಳಲ್ಲಿರುವ ಹಳ್ಳಿಗಳಿಗೆಲ್ಲ ಹೋಗಿ, ತಮ್ಮ ಮಾಧುರ್ಯಪೂರ್ಣ ಸದ್ವರ್ತನೆಯಿಂದ ಜನರ ಮೇಲೆ ಪ್ರಭಾವ ಬೀರುತ್ತಾ, ಸತ್ಸಂಗಗಳ ರಸದೌತಣ ಉಣಿಸುತ್ತಿದ್ದರು."

"ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ೩೦ ವರ್ಷ ನೆಲೆಸಿದ್ದ ಆ ಮಹಾನ್ ಹೃದಯ (ಸ್ವಾಮಿ ಪುರುಷೋತ್ತಮಾನಂದಜಿ) ಅಲ್ಲಿಂದ ಪ್ರಚಂಡ ಶಕ್ತಿಯ ಸತ್ಸಂಕಲ್ಪದ ತರಂಗಗಳನ್ನು ಹರಿಸಿತು... ಅವರ ತೀವ್ರಪ್ರಯತ್ನದ ಫಲವಾಗಿ, ಅವರ ಸ್ಫೂರ್ತಿ ಪ್ರಭೆಯಿಂದ ಓತಪ್ರೋತವಾಗಿ ಕನ್ನಡ ನಾಡಿನ ಉದ್ದಗಲಕ್ಕೆ ಅನೇಕ ಸಂಘಸಂಸ್ಥೆಗಳು ತ್ಯಾಗಿಗಳಿಂದ ಹಾಗೂ ಗೃಹಸ್ಥರಿಂದ ಆರಂಭಿಸಲ್ಪಟ್ಟವು."

ಇದಲ್ಲದೆ ಕರ್ನಾಟಕದಾದ್ಯಂತ ರಾಮಕೃಷ್ಣ–ವಿವೇಕಾನಂದ ಭಾವಧಾರೆಯನ್ನು ಆದರ್ಶವಾಗಿ ಇಟ್ಟುಕೊಂಡಿರುವ ಹಲವಾರು ಶಾಲಾಕಾಲೇಜುಗಳು ಇವೆ. ಅದಲ್ಲದೆ ಸಾವಿರಾರು ಭಕ್ತರು ಮತ್ತು ಹಿತೈಷಿಗಳು ತಮ್ಮ ಸುತ್ತಮುತ್ತಲ ಜನತೆಗೆ ಅದನ್ನು ಪ್ರಸಾರ ಮಾಡುವ ಪವಿತ್ರಕಾರ್ಯವನ್ನು ಮಾಡುತ್ತಿದ್ದಾರೆ.

**(ಈ ಸಂಕ್ಷಿಪ್ತ ಲೇಖನದಲ್ಲಿ ಪ್ರಾತಿನಿಧಿಕವಾಗಿ ಮಾತ್ರವೇ ಕೆಲವು ಆಶ್ರಮಗಳು, ಸಂಸ್ಥೆಗಳು, ಸ್ವಾಮೀಜಿಯವರು ಮತ್ತು ಮಹನೀಯರ ಹೆಸರುಗಳನ್ನು ಉಲ್ಲೇಖಿಸಲು ಸಾಧ್ಯವಾಗಿದೆ. ಕಣ್ತಪ್ಪಿನಿಂದ ಮುಖ್ಯವಾದ ಹೆಸರುಗಳು, ಉಲ್ಲೇಖಗಳು ಯಾವುವಾದರೂ ಬಿಟ್ಟುಹೋಗಿದ್ದರೆ, ಅದಕ್ಕಾಗಿ ಕ್ಷಮೆಯಾಚಿಸುತ್ತೇವೆ. – ಸಂ.)**